## ದಿನಾಂಕ: 31-08-2010ರಂದು ಪೂರ್ವಾಹ್ನ: 11-00ಗಂಟೆಗೆ ಹೇಮಾವತಿ ಸಭಾಂಗಣ, ಜಿಲ್ಲಾ ಪಂಚಾಯಿತಿ, ಹಾಸನ ಇಲ್ಲಿ ನಡೆದ

## ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ ಸಭೆಯ ನಡವಳಿಗಳು

## ಅಧ್ಯಕ್ಷತೆ: ಶ್ರೀಮತಿ ನಂಜಮ್ಮ ಉ: ಕಮಲಮ್ಮ

## ಅಧ್ಯಕ್ಷರು,

## ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ

ಹಾಜರಿ: 06

ಗೈರು ಹಾಜರಿ: 01

| ಕ್ರಸಂ | ವಿಷಯ | ಚರ್ಚೆ | ತೀರ್ಮಾನ |
| --- | --- | --- | --- |
| | | ಸಮಿತಿ ಕಾರ್ಯದರ್ಶಿಯವರಾದ ಉಪಕಾರ್ಯದರ್ಶಿ(ಅಭಿವೃದ್ಧಿ) ಇವರು ಸಭೆಯಲ್ಲಿ ಹಾಜರಿದ್ದ ಮಾನ್ಯ ಸಮಿತಿ ಅಧ್ಯಕ್ಷರು, ಸದಸ್ಯರು, ಮುಖ್ಯ ಲೆಕ್ಕಾಧಿಕಾರಿ, ಮುಖ್ಯ ಯೋಜನಾಧಿಕಾರಿ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಯವರನ್ನು ಸ್ವಾಗತಿಸುತ್ತಾ, ಅಧ್ಯಕ್ಷತೆಯನ್ನು ವಹಿಸಿ ಸಭೆಯನ್ನು ನಡೆಸಿಕೊಡಬೇಕೆಂದು ಮಾನ್ಯ ಸಮಿತಿ ಅಧ್ಯಕ್ಷರನ್ನು ಕೋರಿದರು. | |
| 1 | ಆಸ್ಪತ್ರೆ ಮತ್ತು ಔಷಾಧಲಯಗಳು ಲೆಕ್ಕಶೀರ್ಷಿಕೆಯಡಿ ಜೀವರಕ್ಷಕ ಔಷಧಗಳ ಪೂರೈಕೆ -ಆಡಳಿತ ಮಂಜುರಾತಿ ನೀಡುವ ಬಗ್ಗೆ. | ಟಿಪ್ಪಣಿ ಸಂಖ್ಯೆ: ಜಿಪಂಹಾ/ ಅಭಿ(3) ಪಶುಪಾಲನೆ/2010-11 ದಿನಾಂಕ: 30-08-2010<br>ಉಪನಿರ್ದೇಶಕರು, ಪಶುಪಾಲನಾ ಇಲಾಖೆ, ಹಾಸನ ಇವರು ಆಸ್ಪತ್ರೆ ಮತ್ತು ಔಷಧಾಲಯಗಳು ಲೆಕ್ಕಶೀರ್ಷಿಕೆಯಡಿ ಜೀವರಕ್ಷಕ ಔಷಧಗಳ ಪೂರೈಕೆ-ಆಡಳಿತ ಮಂಜೂರಾತಿ ನೀಡುವಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.<br>ಮಾನ್ಯ ಸದಸ್ಯರಾದ ಶ್ರೀ ಹೆಚ್.ಎಸ್.ಕುಮಾರಸ್ವಾಮಿರವರು ಮಾತನಾಡುತ್ತಾ, ಕೆಲವು ಕಡೆ ಔಷಧಿಗಳು ಬಳಕೆಯಾಗದೆ ಔಷಧಿಗಳ ಉಪಯೋಗದ ದಿನಾಂಕ ಮುಗಿದಿರುತ್ತದೆ. ಇನ್ನು ಕೆಲವು ಆಸ್ಪತ್ರೆಗಳಿಗೆ ಔಷಧಿಗಳ ಹೆಚ್ಚಿನ ಬೇಡಿಕೆಯಿರುತ್ತದೆ. ಆದ್ದರಿಂದ, ಹೆಚ್ಚಿನ ಬೇಡಿಕೆ ಇರುವ ಪಶು ಚಿಕಿತ್ಸಾ ಕೇಂದ್ರಗಳಿಗೆ ಅವಶ್ಯ ಔಷಧಿಗಳನ್ನು ಸರಬರಾಜು ಮಾಡಲು ಕ್ರಮ ವಹಿಸಬೇಕೆಂದು ಕೋರಿದರು. | ಸಭೆಯಲ್ಲಿ ವಿಷಯದ ಬಗ್ಗೆ ಸಮಗ್ರವಾಗಿ ಪರಿಶೀಲಿಸಲಾಯಿತು.<br>ಉಪನಿರ್ದೇಶಕರು, ಪಶುಪಾಲನಾ ಇಲಾಖೆ, ಹಾಸನ ಇವರು ಕೋರಿರುವಂತೆ, ಆಸ್ಪತ್ರೆ ಮತ್ತು ಔಷಧಾಲಯಗಳು ಲೆಕ್ಕ ಶೀರ್ಷಿಕೆಯಡಿ ಜೀವರಕ್ಷಕ ಔಷಧಗಳ ಪೂರೈಕೆಯಡಿ ಅವಶ್ಯ ಔಷಧಿಗಳನ್ನು ದರಗುತ್ತಿಗೆ ಆಧಾರದ ಮೇಲೆ ನಿಯಮಾನುಸಾರ ಖರೀದಿಸಲು ಸಭೆಯು ಸರ್ವಾನುಮತದಿಂದ ಆಡಳಿತಾತ್ಮಕ ಮಂಜೂರಾತಿ ನೀಡಿತು. |

| | | | |
|---|---|---|---|
| 2 | ಕಂಪ್ಯೂಟರ್ ಹಾಗೂ ಬಿಡಿ ಬಾಗ್ಗಗಳು, ಡಿಜಿಟಲ್ ಕ್ಯಾಮರಾವನ್ನು ಖರೀದಿಸಲು ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಅಭಿ(3)ರೇಷ್ಮೆ/2010-11 ದಿನಾಂಕ: 30-08-2010ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಉಪ ನಿರ್ದೇಶಕರು, ರೇಷ್ಮೆ ಇಲಾಖೆ, 2010-11ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆ, ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳು ತಾಂತ್ರಿಕ ಸಲಹೆ, ಪ್ರದರ್ಶನಗಳು, ಪ್ರಚಾರ, ಕ್ಷೇತ್ರೋತ್ಸವ, ದೃಶ್ಯ ಮತ್ತು ಶ್ರವ್ಯ ಹಾಗೂ ಮಹಿಳಾ ಪ್ರಾತ್ಯಕ್ಷತಾ ಕ್ಷೇತ್ರಗಳ ಕಾರ್ಯಕ್ರಮದಡಿ ರೇಷ್ಮೆ ಇಲಾಖೆಗೆ ಅವಶ್ಯವಿರುವ ಕಂಪ್ಯೂಟರ್ ಹಾಗೂ ಬಿಡಿಭಾಗಗಳನ್ನು ಡಿ.ಜಿ.ಎಸ್. ಮತ್ತು ಡಿ ದರದಲ್ಲಿ ಖರೀದಿಸಲು ಹಾಗೂ ಡಿಜಿಟಲ್ ಕ್ಯಾಮರಾವನ್ನು ದರಪಟ್ಟಿ ಕರೆದು ತನ್ಮೂಲಕ ಕನಿಷ್ಠ ದರದಲ್ಲಿ ಖರೀದಿಸಲು ಆಡಳಿತಾತ್ಮಕ ಮಂಜೂರಾತಿ ನೀಡುವಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. | ವಿಷಯದ ಬಗ್ಗೆ ಸಭೆಯಲ್ಲಿ ವಿವರವಾಗಿ ಚರ್ಚಿಸಲಾಯಿತು.<br>ಉಪನಿರ್ದೇಶಕರು, ರೇಷ್ಮೆ ಇಲಾಖೆ, ಹಾಸನ ಇವರು ಕೋರಿರುವಂತೆ 2010-11ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆ, ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳು ತಾಂತ್ರಿಕ ಸಲಹೆ, ಪ್ರದರ್ಶನಗಳು, ಪ್ರಚಾರ, ಕ್ಷೇತ್ರೋತ್ಸವ, ದೃಶ್ಯ ಮತ್ತು ಶ್ರವ್ಯ ಹಾಗೂ ಮಹಿಳಾ ಪ್ರಾತ್ಯಕ್ಷತಾ ಕ್ಷೇತ್ರಗಳ ಕಾರ್ಯಕ್ರಮದಡಿ ರೇಷ್ಮೆ ಇಲಾಖೆಗೆ ಅವಶ್ಯವಿರುವ ಕಂಪ್ಯೂಟರ್ ಹಾಗೂ ಬಿಡಿಭಾಗಗಳನ್ನು ಡಿ.ಜಿ.ಎಸ್. ಮತ್ತು ಡಿ ದರದಲ್ಲಿ ಖರೀದಿಸಲು ಹಾಗೂ ಡಿಜಿಟಲ್ ಕ್ಯಾಮರಾವನ್ನು ದರಪಟ್ಟಿ ಕರೆದು ತನ್ಮೂಲಕ ಕನಿಷ್ಠ ದರದಲ್ಲಿ ಖರೀದಿಸಲು ಸಭೆಯು ಸರ್ವಾನುಮತದಿಂದ ಆಡಳಿತಾತ್ಮಕ ಮಂಜೂರಾತಿ ನೀಡಿತು. |
| 3 | ರೇಷ್ಮೆ ಹುಳುಗಳಿಗೆ ತಗಲುವ ರೋಗಗಳ ನಿಯಂತ್ರಣಕ್ಕಾಗಿ ಸಾಮಾನ್ಯ ಸೋಂಕು ನಿವಾರಕವಾದ, ಬ್ಲೀಚಿಂಗ್ ಪೌಡರನ್ನು ರೂ.2,91,172.00 ಗಳ ಮೌಲ್ಯದಲ್ಲಿ 14000 ಕಿಲೋಗ್ರಾಂ ಬ್ಲೀಚಿಂಗ್ ಪೌಡರನ್ನು ಖರೀದಿಸಲು ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಅಭಿ(3)ರೇಷ್ಮೆ/2010-11 ದಿನಾಂಕ: 08-07-2010ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ರೇಷ್ಮೆ ಹುಳುಗಳಿಗೆ ತಗಲುವ ರೋಗಗಳ ನಿಯಂತ್ರಣಕ್ಕಾಗಿ ಸಾಮಾನ್ಯ ಸೋಂಕು ನಿವಾರಕವಾದ ಬ್ಲೀಚಿಂಗ್ ಪೌಡರನ್ನು ರೂ.2,91,172.00(ರೂಪಾಯಿ ಎರಡು ಲಕ್ಷದ ತೊಂಬತ್ತೊಂದು ಸಾವಿರದ ಒಂದು ನೂರ ಎಪ್ಪತ್ತೆರಡು ಮಾತ್ರ)ಗಳ ಮೌಲ್ಯದಲ್ಲಿ 14000 ಕಿಲೋಗ್ರಾಂ ಬ್ಲೀಚಿಂಗ್ ಪೌಡರನ್ನು ಖರೀದಿಸಲು ಆಡಳಿತಾತ್ಮಕ ಮಂಜೂರಾತಿ ನೀಡುವಂತೆ ಉಪ ನಿರ್ದೇಶಕರು, ರೇಷ್ಮೆ ಇಲಾಖೆ, ಹಾಸನ ಇವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ಸಮಗ್ರವಾಗಿ ಪರಿಶೀಲಿಸಲಾಯಿತು.<br>ಉಪ ನಿರ್ದೇಶಕರು, ರೇಷ್ಮೆ ಇಲಾಖೆ, ಹಾಸನ ಇವರು ಕೋರಿರುವಂತೆ 2010-11ನೇ ಸಾಲಿಗೆ ಸಾಮಾನ್ಯ ಸೋಂಕು ನಿವಾರಕವಾದ ಬ್ಲೀಚಿಂಗ್ ಪೌಡರ್ ರೂ.2,91,172.00(ರೂಪಾಯಿ ಎರಡು ಲಕ್ಷದ ತೊಂಬತ್ತೊಂದು ಸಾವಿರದ ಒಂದು ನೂರ ಎಪ್ಪತ್ತೆರಡು ಮಾತ್ರ)ಗಳ ಮೌಲ್ಯದಲ್ಲಿ 14000 ಕಿಲೋಗ್ರಾಂ ಬ್ಲೀಚಿಂಗ್ ಪೌಡರನ್ನು ಮೆ: ರಾಯಲ್ ಸೀಮಾ ಹೈಸ್ಟ್ರೆಂಥ್ ಹೈಪೋಲಿ: ನಂ.216, ಕೆ.ಜಿ.ಎಸ್.ಕಾಂಪ್ಲೆಕ್ಸ್, ಭಾಗ್ಯನಗರ, ಕರ್ನೂಲ್, ಆಂದ್ರಪ್ರದೇಶ, ಇವರಿಂದ 2009-10ನೇ ಸಾಲಿನಲ್ಲಿ ಅನುಮೋದಿತವಾಗಿರುವ ದರದಲ್ಲಿ ನಿಯಮಾನುಸಾರ ಖರೀದಿಸಲು ಸಭೆಯು ಸರ್ವಾನುಮತದಿಂದ ಮಂಜೂರಾತಿ ನೀಡಿತು. |

| | ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಗಳು | | |
|---|---|---|---|
| 1 | ರೇಷ್ಮೆ ಇಲಾಖೆಯ ಯೋಜನೇ ತರದಡಿ ವೇತನೇತರ ಬಾಬ್ತಿನ ಕಾರ್ಯಕ್ರಮಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡುವ ಬಗ್ಗೆ. | ಉಪನಿರ್ದೇಶಕರು, ರೇಷ್ಮೆ ಇಲಾಖೆ, ಹಾಸನ ಇವರು 2010-11ನೇ ಸಾಲಿಗೆ ಯೋಜನೇತರ ಲೆಕ್ಕಶೀರ್ಷಿಕೆ 2851-00-107-1-02 ರಡಿ ವೇತನೇತರ ಬಾಬ್ತಿನಡಿ ಲಭ್ಯವಾಗಬಹುದಾದ ಅನುದಾನವನ್ನು ಬಳಸಿಕೊಂಡು ಇಲಾಖಾ ಕಟ್ಟಡಗಳ ದುರಸ್ಥಿ ಕಾಮಗಾರಿಗಳ ನಿರ್ವಹಣೆಗಾಗಿ ಮತ್ತು ಜಿಲ್ಲೆಯ ದ್ವಿತಳಿ ರೇಷ್ಮೆ ಬೆಳೆಗಾರರನ್ನು ಪ್ರೋತ್ಸಾಹಿಸಲು ರೇಷ್ಮೆ ಸವಲತ್ತುಗಳನ್ನು ಖರೀದಿಸಿ ಜಿಲ್ಲೆಯ ದ್ವಿತಳಿ ರೇಷ್ಮೆ ಬೆಳೆಗಾರರಿಗೆ ಉಚಿತವಾಗಿ ಸರಬರಾಜು ನೀಡಲು ರೂಪಿಸಲಾಗಿರುವ ರೂ.8.00ಲಕ್ಷಗಳ ಕ್ರಿಯಾ ಯೋಜನೆಗೆ ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿಯ ಅನುಮೋದನೆಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಉಪ ನಿರ್ದೇಶಕರು, ರೇಷ್ಮೆ ಇಲಾಖೆ, ಹಾಸನ ಕೋರಿರುವಂತೆ 2010-11ನೇ ಸಾಲಿಗೆ ಯೋಜನೇತರ ಲೆಕ್ಕಶೀರ್ಷಿಕೆ 2851-00-107-1-02 ರಡಿ ವೇತನೇತರ ಬಾಬ್ತಿನಡಿ ಲಭ್ಯವಾಗ ಬಹುದಾದ ಅನುದಾನವನ್ನು ಬಳಸಿಕೊಂಡು ಇಲಾಖಾ ಕಟ್ಟಡಗಳ ದುರಸ್ಥಿ ಕಾಮಗಾರಿಗಳ ನಿರ್ವಹಣೆಗಾಗಿ ಮತ್ತು ಜಿಲ್ಲೆಯ ದ್ವಿತಳಿ ರೇಷ್ಮೆ ಬೆಳೆಗಾರರನ್ನು ಪ್ರೋತ್ಸಾಹಿಸಲು ರೇಷ್ಮೆ ಸವಲತ್ತುಗಳನ್ನು ಖರೀದಿಸಿ ಜಿಲ್ಲೆಯ ದ್ವಿತಳಿ ರೇಷ್ಮೆ ಬೆಳೆಗಾರರಿಗೆ ಉಚಿತವಾಗಿ ಸರಬರಾಜು ನೀಡಲು ರೂಪಿಸಲಾಗಿರುವ ರೂ.8.00ಲಕ್ಷಗ (ರೂಪಾಯಿ ಎಂಟು ಲಕ್ಷ ಮಾತ್ರ)ಗಳ ಕ್ರಿಯಾ ಯೋಜನೆಗೆ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು. |
| 2 | ಜಲಾನಯನ ಅಭಿವೃದ್ಧಿ ಇಲಾಖೆಯ ಪ್ರಸ್ತಾವನೆಗಳಿಗೆ ಅನುಮೋದನೆ ನೀಡುವ ಬಗ್ಗೆ | ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳು, ಹಾಸನ ಇವರ ಪತ್ರದ ಸಂಖ್ಯೆ: ಜಿಜಅಅ/ಹಾ/ಲೆಕ್ಕ/ಕೃಕೈಸ್ಥಾಸ/ ಪ್ರಸ್ತಾವನೆ/ 2010-11 ದಿ: 03-07-2010ರಲ್ಲಿ ಸಲ್ಲಿಸ ಲಾಗಿರುವ ಹಾಸನ ಜಿಲ್ಲೆಯ ಡಿ.ಪಿ.ಎ.ಪಿ ಮತ್ತು ಐಡಬ್ಲ್ಯೂಡಿಪಿ ಯೋಜನೆಗಳ ವ್ಯಾಪ್ತಿಯ ಗ್ರಾಮಗಳಲ್ಲಿ ಬರುವ ಈ ಕೆಳಕಾಣಿಸಿದ ಪಶು ಚಿಕಿತ್ಸಾಲಯಗಳಲ್ಲಿ ಪಶು ಚಿಕಿತ್ಸೆಗೆ ಅನುಕೂಲವಾಗಲು ಟ್ರೇವಿಸ್ ಷೆಲ್ಟರ್ ಗಳನ್ನು ನಿರ್ಮಿಸಿಕೊಡಲು ಮಾನ್ಯ ಉಪ ನಿರ್ದೇಶಕರು, ಪಶುಸಂಗೋಪನಾ ಇಲಾಖೆ, ಹಾಸನ ಇವರು ತಮ್ಮ ಪತ್ರ ಸಂಖ್ಯೆ: ಉನಿಹಾ/ತಾಂತ್ರಿಕ/ಸು2/ಟ್ರೇವಿಸ್ /2009-10 997 ದಿನಾಂಕ: 14-12-2009ರಲ್ಲಿ ಇಲಾಖೆ ಯನ್ನು ಕೋರಿದ್ದು, ಹಾಗೂ ಈ ಟ್ರೇವಿಸ್ ಷೆಲ್ಟರ್ ಗಳನ್ನು ನಿರ್ಮಿಸಲು ತಗಲುವ ವೆಚ್ಚದ ಅಂದಾಜು ಪಟ್ಟಿಯನ್ನು ಸಹ ತಯಾರಿಸಿ ಸಲ್ಲಿಸಿರುತ್ತಾರೆ. ಆದ್ದರಿಂದ, ಪಶುಸಂಗೋಪನೆ ಇಲಾಖೆಯ ಮಾರ್ಗದರ್ಶನದಲ್ಲಿ ಟ್ರೇವಿಸ್ ಷೆಲ್ಟರ್ ಗಳನ್ನು ನಿರ್ಮಿಸುವ ಅವಶ್ಯಕತೆ ಯಿರುತ್ತದೆ. ಸದರಿ ವೆಚ್ಚಗಳಿಗೆ ಮಂಜೂರಾತಿಯನ್ನು ನೀಡುವಂತೆ ಹಾಗೂ ವೆಚ್ಚಗಳನ್ನು | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಗಿ ದಿ: 13-07-2010 ರಂದು ಜರುಗಿದ ಕೃಷಿ ಮತ್ತು ಕೈಗಾರಿಕೆ ಸ್ಥಾಯಿ ಸಮಿತಿ ಸಬೆಯಲ್ಲಿ ಅರಸೀಕೆರೆ ತಾಲ್ಲೂಕಿನ ನೇರ್ಲಿಗೆ ಗ್ರಾಮ, ಬೇಲೂರು ತಾಲ್ಲೂಕಿನ ಬಿಕ್ಕೋಡು ಗ್ರಾಮ,ಹಾಸನ ತಾಲ್ಲೂಕಿನ ದುಂಡನಾಯಕನಹಳ್ಳಿ, ಚನ್ನರಾಯಪಟ್ಟಣ ತಾಲ್ಲೂಕಿನ ಹಿರೀಸಾವೆ ಗ್ರಾಮ, ಹೊಳೆನರಸೀಪುರ ತಾಲ್ಲೂಕಿನ ತಾತನಹಳ್ಳಿ ಗ್ರಾಮ, ಹೊಳೆನರಸೀಪುರ ತಾಲ್ಲೂಕಿನ ದೇವರಮುದ್ದನಹಳ್ಳಿ ಗ್ರಾಮಗಳಲ್ಲಿ ಟ್ರೇವಿಸ್ ಷೆಲ್ಟರ್ ಗಳನ್ನು ತಲಾ ರೂ.85000.00ಗಳ ವೆಚ್ಚದಲ್ಲಿ ನಿರ್ಮಿಸಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತ್ತು.<br>ಈ ಮೇಲೆ ಅನುಮೋದನೆಗೊಂಡಿದ್ದರಲ್ಲಿ ಹೊಳೆನರಸೀಪುರ ತಾಲ್ಲೂಕಿನ ತಾತನಹಳ್ಳಿ ಬದಲಿಗೆ ಹಾಸನ ತಾಲ್ಲೂಕಿನ ಸಾಲಗಾಮೆ ಗ್ರಾಮದಲ್ಲಿ ಮತ್ತು ಕೈಬಿಟ್ಟು ಹೋಗಿದ್ದ ಆಲೂರು ತಾಲ್ಲೂಕಿನ ಮಡಬಲು ಗ್ರಾಮದಲ್ಲಿ ಟ್ರೇವಿಸ್ |

ಸಂಬಂಧಪಟ್ಟ ಡಿ.ಪಿ.ಎ.ಪಿ/ ಐ ನ ಡಬ್ಲ್ಯೂ ಡಿಪಿ ಆಡಳಿತ ವೆಚ್ಚದಿಂದ ಭರಿಸಲು ಅನುಮೋದನೆ ನೀಡಲು ಕೋರಿರುತ್ತಾರೆ.

**ಟ್ರೇವಿಸ್ ಷೆಲ್ಟರ್ ನಿರ್ಮಿಸಲು ಪ್ರಸ್ತಾಪಿಸಿರುವ ಗ್ರಾಮ ಮತ್ತು ಪಶು ಚಿಕಿತ್ಸಾಕೇಂದ್ರಗಳ ವಿವರ**

| ಕ್ರಸಂ | ಯೋಜನೆ | ತಾಲ್ಲೂಕು | ಗ್ರಾಮ/ಪಶು ಚಿಕಿತ್ಸಾಲಯ | ವೆಚ್ಚವಾಗಲಿರುವ ಅಂದಾಜು ಮೊತ್ತ ರೂ.ಗಳಲ್ಲಿ |
|---|---|---|---|---|
| 1 | ಹರಿಯಾಲಿ-1 | ಅರಸೀಕೆರೆ | ನೇರ್ಲಿಗೆ | 85000.00 |
| 2 | ಡಿಪಿಎಪಿ 7ನೇ ಬ್ಯಾಚ್ | ಬೇಲೂರು | ಬಿಕ್ಕೋಡು | 85000.00 |
| 3 | ಡಿಪಿಎಪಿ 7ನೇ ಬ್ಯಾಚ್ | ಹಾಸನ | ದುಂಡನಾಯಕನ ಹಳ್ಳಿ | 85000.00 |
| 4 | ಡಿಪಿಎಪಿ 6ನೇ ಬ್ಯಾಚ್ | ಚನ್ನರಾಯಪಟ್ಟಣ | ಹಿರಿಸಾವೆ | 85000.00 |
| 5 | ರಾ ಜ ಅ ಯೋ | ಹಾಸನ | ಸಾಲಗಾಮೆ | 85000.00 |
| 6 | ಐಡಬ್ಲ್ಯೂ ಡಿಪಿ -6 | ಹೊಳೆನರಸೀಪುರ | ದೇವರಮುದ್ದನಹಳ್ಳಿ | 85000.00 |
| 7 | ಪ ಘ ಅ ಯೋ | ಆಲೂರು | ಮಡಬಲು | 85000.00 |

ಷೆಲ್ಟರ್ ಗಳನ್ನು ನಿರ್ಮಿಸುವ ಬಗ್ಗೆ ಸಭೆಯಲ್ಲಿ ವಿಸ್ತೃತವಾಗಿ ಚರ್ಚಿಸಲಾಗಿ ಸಭೆಯು ಸರ್ವಾನುಮತದಿಂದ ಪರಿಷ್ಕೃತ ಪ್ರಸ್ತಾವನೆಗೆ ಅನುಮೋದನೆ ನೀಡಿತು.

ಮಾನ್ಯ ಅಧ್ಯಕ್ಷರು, ಕೃಷಿ ಮತ್ತು ಕೈಗಾರಿಕೆ ಸ್ಥಾಯಿ ಸಮಿತಿ ಇವರು ಮಾತನಾಡುತ್ತಾ, ಹಿಂದೆ ನಿರ್ಮಿತಿ ಕೇಂದ್ರದಿಂದ ಟ್ರೇವಿಸ್ ಷೆಲ್ಟರ್ ಗಳ ನಿರ್ಮಾಣಕ್ಕೆ ತಲಾ ರೂ.85000.00ಗಳಂತೆ ಅಂದಾಜು ಪಟ್ಟಿಯನ್ನು ಹಳೆಯ ದರಪಟ್ಟಿಯಂತೆ ಸಿದ್ಧಪಡಿಸಿದ್ದು, ಈಗ ಸದರಿ ಅಂದಾಜು ಪಟ್ಟಿ ಗಳನ್ನು ಪರಿಷ್ಕೃತ ಹೊಸದರಪಟ್ಟಿಯಂತೆ, ತಲಾ ರೂ.1,00,000.00ಗಳ ವೆಚ್ಚದಲ್ಲಿ ಅಂದಾಜು ಪಟ್ಟಿಗಳನ್ನು ಸಿದ್ಧಪಡಿಸಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವಂತೆ ಸೂಚಿಸಿದರು ಹಾಗೂ ಸಭೆಯು ಸದರಿ ಸೂಚನೆಗೆ ಸರ್ವಾನುಮತದಿಂದ ಅನುಮೋದನೆ ನೀಡಿತು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ನಂಜಮ್ಮ ಉ: ಕಮಲಮ್ಮ),
ಅಧ್ಯಕ್ಷರು,
ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ
ಜಿಲ್ಲಾ ಪಂಚಾಯಿತಿ, ಹಾಸನ.